ದಿನಾಂಕಃ **09.09.2025** ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲುಃ ಶ್ರೀಮತಿ ಬಿ ಆರ್ ಆರ್ ವಕೀಲರಿಂದಃ-</u>

ಈ ದಾವೆಯನ್ನು ವಾದಿಯು ಯಾವ ಪರಿಹಾರ ಕೋಡಿ ಹೂಡಿರುತ್ತಾರೆ ಎಂದು ನನಗೆ ಗೊತ್ತು. ಯಾವ ವಿಚಾರಕ್ಕೆ ಹೂಡಿರುತ್ತಾರೆ ಎಂದರೆ ಸಾಕ್ಷಿಯು ನಮ್ಮ ಮನೆಯ ಪಕ್ಕದಲ್ಲಿರುವ ಖಾಲಿ ಜಾಗ ತಮಗೆ ಸೇರಿದ್ದು ಎಂದು ದಾವೆ ಹೂಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಖಾಲಿ ಜಾಗವು ನಮ್ಮ ಮನೆಯ ದಕ್ಷಿಣಕ್ಕೆ ಬರುತ್ತದೆ. ನಮ್ಮ ಮನೆಯ ಮತ್ತು ಖಾಲಿ ಜಾಗದ ಒಟ್ಟು ಚಕ್ಕುಬಂಧಿ ಪೂರ್ವಕ್ಕೆ ಃ ಖಾಸಗಿಯವರ ಸ್ವತ್ತು , ಪಶ್ಚಿಮಕ್ಕೆ ಃ ಮುನ್ಸಿಪಲ್ ರಸ್ತೆ, ಉತ್ತರಕ್ಕೆ ಃ ಟಿ ಡಿ ರಾಜನ್ ರವರ ಸ್ವತ್ತು, ದಕ್ಷಿಣಕ್ಕೆ ಃ ರಂಗಪ್ಪ ರವರ ಸ್ವತ್ತು. ದಕ್ಷಿಣ ಭಾಗಕ್ಕೆ ಇರುವ ರಂಗಪ್ಪ ಎಂದರೆ ವಾದಿಯ ತಂದೆ ಎಂದರೆ ಸರಿ. ನಾನು ಈ ಮೇಲೆ ಹೇಳಿರುವ ಸ್ವತ್ತನ್ನು ಟಿ ಡಿ ಸತ್ಯನ್ ಬಿನ್ ಟಿ ಕೆ ದತ್ತಾತ್ರೇಯಶೆಟ್ಟಿ ರವರಿಂದ

2009 ನೇ ಸಾಲಿನಲ್ಲಿ ಕ್ರಯಕ್ಕೆ ಪಡೆದಿರುತ್ತೇನೆ. ನಾನು ಖರೀದಿ ಮಾಡುವ ಸಮಯದಲ್ಲಿ ಸದರಿ ಆಸ್ತಿ ಅನ್ಯಕ್ರಾಂತವಾಗಿತ್ತು. ಟಿ ಡಿ ಸತ್ಯನ್ ಅವರಿಗೆ ಈ ಆಸ್ತಿ ಹೇಗೆ ಬಂತು ಎಂದರೆ ಸಾಕ್ಷಿ ಅದು ಅವರ ಪಿತ್ರಾರ್ಜಿತ ಆಸ್ತಿ ಎಂದು ನುಡಿಯುತ್ತಾರೆ. ನಾನು ನ್ಯಾಯಾಲಯಕ್ಕೆ ಸಲ್ಲಿಸಿರುವ ತಕರಾರಿನಲ್ಲಿ ಸದರಿ ಆಸ್ತಿಯು ಟಿ ಡಿ ಸತ್ಯನ್ ರವರ ಪಿತ್ರಾರ್ಜಿತ ಆಸ್ತಿ ಎಂದು ನಮೂದು ಮಾಡಿರುತ್ತೇನೆ. ಟಿ ಡಿ ಸತ್ಯನ್ ರವರಿಂದ ಪೂರ್ವ ಪಶ್ಚಿಮ 75 ಅಡಿ, ಉತ್ತರ ದಕ್ಷಿಣ 80 ಅಡಿ ಆಸ್ತಿಯನ್ನು ಖರೀದಿಸಿರುತ್ತೇನೆ. ನಾನು ಖರೀದಿಸುವ ಪೂರ್ವದಲ್ಲೇ ಅದು ನಿವೇಶನವಾಗಿತ್ತು. ಖರೀದಿ ಮಾಡಿದ 2-3 ವರ್ಷಗಳ ನಂತರ ಮನೆ ಕಟ್ಟಲು ಪ್ರಾರಂಭಸಿರುತ್ತೇನೆ. ನಾನು ಖರೀದಿ ಮಾಡಿರುವ ಆಸ್ತಿ ಬಾಬ್ತು 40 x 75 ಅಡಿಗಳಲ್ಲಿ ಮನೆ ಕಟ್ಟಿದ್ದು ಉಳಿದ 40 x 75 ಖಾಲಿ ಬಿಟ್ಟಿರುತ್ತೇನೆ.

ನಿಡಿ-7 ರ ಇ ಸ್ವತ್ತಿನಲ್ಲಿ ಮನೆ ಹಾಗೂ ಖಾಲಿ ನಿವೇಶನದ ವಿಸ್ತೀರ್ಣ ನಮೂದು ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಲೋಕೋಪಯೋಗಿ ಗುತ್ತಿಗೆದಾರ. ನಿಡಿ7 ರಲ್ಲಿ ನಿವೇಶನದ ವಿಸ್ತೀರ್ಣ 557.32 ಮೀಟರ್ ಎಂದು ನಮೂದು ಇದೆ ಎಂದರೆ ಸರಿ. ಕಟ್ಟಡದ ವಿಸ್ತೀರ್ಣ 204.386 ಮೀಟರ್ ಎಂದು ನಮೂದು ಇದೆ ಎಂದರೆ ಸಾಕ್ಷಿಯು ನಿವೇಶನದ ಅರ್ಧ ಭಾಗದಲ್ಲಿ ಮನೆ ಕಟ್ಟಿ ಅರ್ಧ ಭಾಗ ಖಾಲಿ ಬಿಟ್ಟಿರುತ್ತೇವೆ ಎಂದು ನುಡಿಯುತ್ತಾರೆ. 557 ಮೀಟರ್ ನಿಂದ 204 ಮೀಟರನ್ನು ಕಳೆದರೆ ಅರ್ಧ ಭಾಗಕ್ಕಿಂತ ಜಾಸ್ತಿ ಬರುತ್ತದೆ ಎಂದರೆ ಸಾಕ್ಷಿ ಅರ್ಧ ಭಾಗ ಬರುತ್ತದೆ ಎಂದು ನುಡಿಯುತ್ತಾರೆ.

( ಮುಂದುವರೆದ ಪಾಟೀ ಸವಾಲಿಗಾಗಿ ಸಮಯಕೋರಿದ್ದರಿಂದ ಮುಂದೂಡಲಾಯಿತು )

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ

Sd/-
2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.